## 1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ರಾಮನಗರ.

**ದಿನಾಂಕ** 12 **ನೇ ಜೂನ್** 2024

**ಸಿ.ಸಿ.** 88/2023

ಪಿರ್ಯಾದುರಾರರುಃ ಐಜೂರು ಪೊಲೀಸ್ ಠಾಣೆ,
ರಾಮನಗರ.

-ವಿರುದ್ಧ-

ಆರೋಪಿಗಳುಃ

1. ಶ್ರೇಯಸ್ ಗೌಡ ಹೆಚ್ ಎಸ್ @ ಚಿನ್ನಿ
ಬಿನ್ ಶಿವಣ್ಣ,
ವಯಸ್ಸು ಸುಮಾರು 27 ವರ್ಷಗಳು,
ವಾಸಃ 3 ನೇ ಕ್ರಾಸ್, ವಿನಾಯಕನಗರ,
ರಾಮನಗರ ಟೌನ್.

2. ನವೀನ್ ಬಿನ್ ವೆಂಕಟೇಶ್
ವಯಸ್ಸು ಸುಮಾರು 29 ವರ್ಷ,
ವಾಸಃ ಕಾಯಿಸೊಪ್ಪಿನ ಬೀದಿ ,
ರಾಮನಗರ ಟೌನ್

3. ನಾಗೇಶ್ ಎಂ ಬಿನ್ ಮುತ್ತುರಾಜ
ವಯಸ್ಸು ಸುಮಾರು 27 ವರ್ಷ,
ವಾಸಃ ಗಣೇಶ ದೇವಸ್ಥಾನದ ಹತ್ತಿರ,
ಕಾಯಿಸೊಪ್ಪಿನ ಬೀದಿ ,
ರಾಮನಗರ ಟೌನ್

4. ರಾಕೇಶ್ ಬಿನ್ ಶ್ರೀನಿವಾಸ
ವಯಸ್ಸು ಸುಮಾರು 22 ವರ್ಷ,
ವಾಸಃ ಗಣೇಶ ದೇವಸ್ಥಾನದ ಹತ್ತಿರ,
ಕಾಯಿಸೊಪ್ಪಿನ ಬೀದಿ,
ರಾಮನಗರ ಟೌನ್.

5. ಮನೋಜ್ ಎಂ ಬಿನ್ ಮುತ್ತ್ಯುಂಜಯ್ಯ,
ವಯಸ್ಸು ಸುಮಾರು 24 ವರ್ಷ,
ವಾಸಃ 4 ನೇ ಕ್ರಾಸ್, ಎಂ.ಜಿ. ರಸ್ತೆ, ಅಗ್ರಹಾರ,

ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ,
ರಾಮನಗರ ಟೌನ್.ಸ

6. ಲೋಕೇಶ್ ಬಿನ್ ಶ್ರೀನಿವಾಸ,
ವಯಸ್ಸು ಸುಮಾರು 29 ವರ್ಷ,
ವಾಸಃ ಗಣೇಶ ದೇವಸ್ಥಾನ ಹತ್ತಿರ,
ಕಾಯಿಸೊಪ್ಪಿನ ಬೀದಿ ,
ರಾಮನಗರ ಟೌನ್

**ದೋಷಾರೋಪಣೆ**

ಶ್ರೀ ಮಹೇಶ್.ಬಿ.ಟಿ, 1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ರಾಮನಗರ ಆದ ನಾನು ನಿಮ್ಮನ್ನು ದೋಷರೋಪಣೆಗೆ ಗುರಿಪಡಿಸುವ ಕ್ರಮವೇನೆಂದರೆ ಃ-

ಮೊದಲನೆಯದಾಗಿ, ದಿನಾಂಕ 16.05.2023 ರಂದು ರಾತ್ರಿ 10 ರಿಂದ 10-30 ಗಂಟೆ ಸಮಯದಲ್ಲಿ ರಾಮನಗರ ಟೌನ್ ಗಾಂಧಿನಗರದ ಸರ್ಕಲ್ ಬಳಿ ಯೂ ಟರ್ನ್ ತೆಗೆದುಕೊಳ್ಳುವ ಸಂಬಂಧ ಚಾಸಾ-1 ರಿಂದ 4ರವರ ಬಳಿ ಮಾತಿನ ಚಕಮಕಿ ನಡೆಸಿದ ವಿಚಾರವಾಗಿ ಚಾಸಾ-1 ರಿಂದ ಚಾಸಾ-4ರವರು ಬೀಡಾ ತೆಗೆದುಕೊಳ್ಳುತ್ತಿದ್ದಾಗ 1 ರಿಂದ 6ನೇ ಆರೋಪಿಗಳಾದ ನೀವು ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮವಾಗಿ ಗುಂಪುಕಟ್ಟಿಕೊಂಡು ಬಂದಿದ್ದು, ಈ ರೀತಿಯಾಗಿ ನೀವು ಭಾ.ದಂ.ಸ. ಕಲಂ 143 ಸಹವಾಚಕ 149ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆರೋಪ ಇದೆ?

ಎರಡನೆಯದಾಸಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 6ನೇ ಆರೋಪಿಗಳಾದ ನೀವು ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮವಾಗಿ ಗುಂಪು ಕಟ್ಟಿದ್ದಲ್ಲದೆ ಕೈಗಳಲ್ಲಿ ಅಪಾಯಕಾರಿ ಆಯುಧಗಳಾದ ಕಲ್ಲು ಮತ್ತು ಕಬ್ಬಿಣದ ಪಂಚ ಹಿಡಿದುಕೊಂಡು ಬಂದು ದೊಂಬಿ ನಡೆಸಿದ್ದು,

ಈ ರೀತಿಯಾಗಿ ನೀವು ಭಾ.ದಂ.ಸ. ಕಲಂ 147 ಸಹವಾಚಕ 149 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆರೋಪ ಇದೆ?

ಮೂರನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 6 ನೇ ಆರೋಪಿಗಳಾದ ನೀವು ಅಪರಾಧ ಎಸಗುವ ಏಕೋದ್ದೇಶದಿಂದ ಚಾಸಾ-2 ರಿಂದ ಚಾಸಾ-4 ರವರಿಗೆ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ಈ ರೀತಿಯಾಗಿ ನೀವು ಭಾ.ದಂ.ಸ. ಕಲಂ 504 ಸಹವಾಚಕ 149 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆರೋಪ ಇದೆ?

ನಾಲ್ಕನೆಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 6 ನೇ ಆರೋಪಿಗಳಾದ ನೀವು ಅಪರಾಧ ಎಸಗುವ ಏಕೋದ್ದೇಶದಿಂದ, ಚಾಸಾ-2 ರಿಂದ ಚಾಸಾ-4 ರವರಿಗೆ ಕೈಗಳಿಂದ ಹೊಡೆದು ನೋಂವುಂಟು ಮಾಡಿದ್ದು, ಈ ರೀತಿಯಾಗಿ ನೀವು ಭಾ.ದಂ.ಸ. ಕಲಂ 323 ಸಹವಾಚಕ 149 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆರೋಪ ಇದೆ?

ಐದನೆಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 6 ನೇ ಆರೋಪಿಗಳಾದ ನೀವು ಅಪರಾಧ ಎಸಗುವ ಏಕೋದ್ದೇಶದಿಂದ 1 ನೇ ಆರೋಪಿ ಚಾಸಾ-2 ರವರಿಗೆ ಕಬ್ಬಿಣದ ಪಂಚ್ ನಿಂದ ಮುಖ, ಮೂಗಿನ ಮೇಲೆ ಹಾಗೂ ಚಾಸಾ-3 ರವರಿಗೆ ಅದೇ ಕಬ್ಬಿಣದ ಪಂಚ್ ನಿಂದ ಮುಖ, ತುಟಿ, ತಲೆಯ ಮೇಲೆ ಹೊಡೆದು ತೀವ್ರ ಸ್ವರೂಪದ ರಕ್ತಗಾಯಪಡಿಸಿದ್ದು, ಈ ರೀತಿಯಾಗಿ ನೀವು ಭಾ.ದಂ.ಸ. ಕಲಂ 326 ಸಹವಾಚಕ 149 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆರೋಪ ಇದೆ?

ಆರನೆಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 6 ನೇ ಆರೋಪಿಗಳಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ 1 ನೇ ಆರೋಪಿಯಾದ ನೀನು ಕಬ್ಬಿಣದ ಪಂಚ್ ನಿಂದ ಚಾಸಾ-4 ರವರಿಗೆ ತಲೆ ಮತ್ತು ಮುಖದ ಭಾಗಕ್ಕೆ ಹೊಡೆದಿದ್ದು, 2 ನೇ ಆರೋಪಿಯಾದ ನೀನು ಸೀಮೆಂಟ್ ಕಲ್ಲಿನಿಂದ ಚಾಸಾ-2 ರವರ ಮೂಗು, ಬಾಯಿಗೆ ಹೊಡೆದು, ಚಾಸಾ-3 ರವರಿಗೆ ಕುತ್ತಿಗೆ ಹಾಗೂ ಮೈ ಕೈ ಮೇಲೆ ಹೊಡೆದು, ಚಾಸಾ-4 ರವರಿಗೆ ಕೈ ಕಾಲುಗಳಿಂದ ಹೊಡೆದು ಸಾಧಾರಣ ಸ್ವರೂಪದ ರಕ್ತಗಾಯಪಡಿಸಿದ್ದು, ಈ ರೀತಿಯಾಗಿ ನೀವು ಭಾ.ದಂ.ಸ. ಕಲಂ 324 ಸಹವಾಚಕ 149 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆರೋಪ ಇದೆ?

ಕೊನೆಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 6 ನೇ ಆರೋಪಿಗಳಾದ ನೀವುಗಳು ಆಪರಾಧ ಮಾಡುವ ಏಕೋದ್ದೇಶದಿಂದ ಚಾಸಾ-2 ರಿಂದ ಚಾಸಾ-4 ರವರಿಗೆ ನಿಮ್ಮನ್ನು ಕೊಲೆ ಮಾಡದೆ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದ್ದು, ಈ ರೀತಿಯಾಗಿ ನೀವು ಭಾ.ದಂ.ಸ. ಕಲಂ 506 ಸಹವಾಚಕ 149 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆರೋಪ ಇದೆ?

ಮೇಲಿನ ಆರೋಪವನ್ನು 1 ರಿಂದ 6 ನೇ ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನನ್ನ ಸಮಕ್ಷಮ ಪಡೆದುಕೊಳ್ಳಲಾಯಿತು

**(ಮಹೇಶ್ ಬಿ.ಟಿ)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ರಾಮನಗರ.**

ಪ್ರಶ್ನೆ - 1. ನಿಮಗೆ ಓದಿ ಹೇಳಿದ ಆರೋಪಣೆಯ ವಿವರಗಳು ಅರ್ಥವಾಯಿತಾ ?

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

3 ನೇ ಆರೋಪಿಯ ಉತ್ತರಃ

4 ನೇ ಆರೋಪಿಯ ಉತ್ತರಃ

5 ನೇ ಆರೋಪಿಯ ಉತ್ತರಃ

6 ನೇ ಆರೋಪಿಯ ಉತ್ತರಃ

ಪ್ರಶ್ನೆ-2. ನೀವುಗಳು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬಯಸುವಿರಾ ?

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

3 ನೇ ಆರೋಪಿಯ ಉತ್ತರಃ

4 ನೇ ಆರೋಪಿಯ ಉತ್ತರಃ

5 ನೇ ಆರೋಪಿಯ ಉತ್ತರಃ

6 ನೇ ಆರೋಪಿಯ ಉತ್ತರಃ

ಈ ಮೇಲಿನ ಹೇಳಿಕೆಯನ್ನು ಅಪಾದಿತರಿಗೆ ಓದಿ, ಹೇಳಿ, ತಿಳಿಸಿ ಅವರ ಹೇಳಿಕೆ ಪಡೆದುದ್ದಾಗಿ ದೃಢೀಕರಿಸುತ್ತೇನೆ.

**(ಮಹೇಶ್ ಬಿ.ಟಿ)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ರಾಮನಗರ.**